2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ,
ಕಡೂರು.

<u>ಉಪಸ್ಥಿತರು</u>

ಶ್ರೀ ಈರಪ್ಪ ಢವಳೇಶ್ವರ್ ಬಿ.ಎ. ಎಲ್.ಎಲ್.ಬಿ,
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಕಡೂರು.

<u>ಅಸಲು ದಾವಾ ಸಂಖ್ಯೆ:240/2020</u>

ದಿನಾಂಕ : 10 ನೇ ಸೆಪ್ಟಂಬರ್ 2020

ವಾದಿ/ಯರುಃ ಶ್ರೀಮತಿ ಮಂಗಳಮ್ಮ ಕೋಂ ಶೇಖರಪ್ಪ, 58 ವರ್ಷಗಳು, ಗೃಹಿಣಿ, ವಾಸಃ ವಾರ್ಡ್ ನಂ.16, ಶ್ರೀ ರಾಮದೇವರ ಗುಡಿ ಬೀದಿ, ಬೀರೂರು ನಗರ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

(ಪ್ರತಿನಿಧಿಸುವವರುಃ ಶ್ರೀ ಎಸ್.ಎನ್.ಆನಂದ ನ್ಯಾಯವಾದಿಗಳು)

- ವಿರುದ್ದ-

ಪ್ರತಿವಾದಿ/ಯರುಃ

1. ಮೊಹಮದ್ ಫಾಜಿಲ್ ಬಿನ್ ಲೇಟ್ ಪೀರಾ ಸಾಬ್, 67 ವರ್ಷಗಳು, ವ್ಯಾಪಾರಗಾರರು,
2. ಮೊಹಮದ್ ಅಜಾಜ್ ಬಿನ್ ಮೊಹಮದ್ ಫಾಜಿಲ್, 35 ವರ್ಷಗಳು, ವ್ಯಾಪಾರಗಾರರು,

ಇಬ್ಬರ ವಾಸಃ ಹಾಲಪ್ಪ ಬಡಾವಣೆ, ಬೀರೂರು ನಗರ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

(ಪ್ರತಿನಿಧಿಸುವವರುಃ ಶ್ರೀ ಮಹೇಶ್ ಬಿ, ನ್ಯಾಯವಾದಿಗಳು)

ಅರ್ಜಿದಾರರುಃ ಶ್ರೀಮತಿ ಮಂಗಳಮ್ಮ

-ವಿರುದ್ದ-

ಎದುರುದಾರರುಃ ಮೊಹಮದ್ ಫಾಜಿಲ್ ಮತ್ತು ಇನ್ನೊಬ್ಬರು

:: **ಮಧ್ಯಂತರ ಅರ್ಜಿ ಸಂಖ್ಯೆ:1 ರ ಕುರಿತಾದ ಆದೇಶ** ::

ಪ್ರಸ್ತುತ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ವಾದಿ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವರ್ತಿ ಕಲಂ 151 ರ ಅಡಿಯಲ್ಲಿ ಸಲ್ಲಿಸಿ, ದಾವಾ ಅನುಸೂಚಿತ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿ ಪ್ರತಿವಾದಿಯರಾಗಲೀ, ಅವರ ಕುಟುಂಬದವರಾಗಲಿ ಅಥವಾ ಅವರಿಂದ ನೇಮಕಗೊಂಡ ಯಾವುದೇ ಕೆಲಸಗಾರರಾಗಲೀ, ಪ್ರತಿನಿಧಿಗಳಾಗಲೀ, ಬೆಂಬಲಿಗರಾಗಲೀ ಮತ್ತು ಯಾವುದೇ ವ್ಯಕ್ತಿಗಳು ಸಹ ಅತಿಕ್ರಮಣ ಪ್ರವೇಶ ಮಾಡಿ ಯಾವುದೇ ಕಟ್ಟಡ ಕಾಮಗಾರಿ ಹಾಗೂ ತಳಪಾಯವನ್ನು ತೆಗೆಯದಂತೆ ಹಾಗೂ ವಾದಿಗೆ ಪಶ್ಚಿಮ ದಿಕ್ಕಿನಿಂದ ನೈಸರ್ಗಿಕವಾಗಿ ಬರುತ್ತಿರುವ ಗಾಳಿ ಹಾಗೂ ಬೆಳಕಿಗೆ ತೊಂದರೆ ಉಂಟು ಮಾಡದಂತೆ ಮತ್ತು ಸದರಿ ಗೋಡೆಗೆ ಯಾವುದೇ ಹಾನಿ ಉಂಟುಮಾಡದಂತೆ ದಾವೆಯ ಅಂತಿಮ ತೀರ್ಪನ್ನು ನೀಡುವವರೆಗೂ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶವನ್ನು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2. ಪ್ರಸ್ತುತ 1 ನೇ ಮಧ್ಯಂತರ ಅರ್ಜಿಗೆ ಪೂರಕವಾಗಿ ವಾದಿಯು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿನ ಅಂಶಗಳು ಈ ಕೆಳಕಂಡಂತೆ ಇವೆ:-

ತಾನು ದಾವಾ ಆಸ್ತಿಯ ಅಸೆಸ್‌ಮೆಂಟ್ ನಂಬರ್ 3709/3594 ರಲ್ಲಿ ಒಟ್ಟು 16 ಇಂಟು 50 ಅಡಿ ವಿಸ್ತೀರ್ಣದಲ್ಲಿ ಪೂರ್ವ – ಪಶ್ಚಿಮ 10 ಅಡಿ, ಉತ್ತರ – ದಕ್ಷಿಣ 40 ಅಡಿ, ವಿಸ್ತೀರ್ಣದಲ್ಲಿ ಆರ್ ಸಿ ಸಿ ಮನೆ ಮತ್ತು ಉಳಿದದ್ದು ಖಾಲಿ ನಿವೇಶನ/ಹಿತ್ತಲು ಇದ್ದು, ಸದರಿ ಆಸ್ತಿಯ ಮಾಲೀಕತ್ವವನ್ನು ಹೊಂದಿ ಸ್ವಾಧೀನಾನುಭವದಲ್ಲಿ ಇರುತ್ತೇನೆ. ದಾವಾ ಸ್ವತ್ತು ಮೂಲತಃ ಕರೀಂ ಸಾಬ್ ಸಾಹೇಬ್ ಬಿನ್ ಲೇಟ್ ಹಯಾತ್ ಸಾಹೇಬ್ ಎಂಬುವವರಿಗೆ ಸೇರಿದ್ದು, ಸದರಿ ಸ್ವತ್ತನ್ನು ದಿನಾಂಕ 18-05-2002 ರಂದು ತಾನು ನೋಂದಾಯಿತ ಕ್ರಯ ಪತ್ರದ ಮೂಲಕ ಖರೀದಿಸಿರುತ್ತೇನೆ. ದಾವಾ ಸ್ವತ್ತನ್ನು ಖರೀದಿಸಿದ ನಂತರ ದಾವಾ ಸ್ವತ್ತಿನ ಖಾತೆಯು ತನ್ನ ಹೆಸರಿಗೆ ಬದಲಾವಣೆಯಾಗಿರುತ್ತದೆ. ಖರೀದಿ ಮಾಡಿದ ದಿನದಿಂದ ತಾನು ದಾವಾ ಸ್ವತ್ತಿಗೆ

ಕಂದಾಯವನ್ನು ಪಾವತಿ ಮಾಡುತ್ತಾ ಬಂದಿರುತ್ತೇನೆ ಮತ್ತು ಅಂದಿನಿಂದ ಸದರಿ ಸ್ವತ್ತಿನಲ್ಲಿ ತಾನು ಮತ್ತು ತನ್ನ ಕುಟುಂಬದವರು ವಾಸವಾಗಿರುತ್ತೇವೆ.

3. ಮುಂದುವರೆದು, ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿರುವ ಮನೆಯು ಹಳೆಯದಾಗಿದ್ದು ಬೀಳುವ ಸ್ಥಿತಿಯಲ್ಲಿತ್ತು. ಪ್ರತಿವಾದಿಯರು ಸದರಿ ಸ್ವತ್ತನ್ನು ಖರೀದಿ ಮಾಡಿ ಅದನ್ನು ಕೆಡವಿ ಖಾಲಿ ನಿವೇಶನವನ್ನಾಗಿ ಪರಿವರ್ತಿಸಿ ನಂತರ ಹೊಸ ಮನೆಯನ್ನು ನಿರ್ಮಾಣ ಮಾಡುವ ಹಂತದಲ್ಲಿರುತ್ತಾರೆ. ಸದರಿ ಸಮಯದಲ್ಲಿ ಪ್ರತಿವಾದಿಯರು ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಇರುವ ಗೋಡೆಗೆ ಯಾವುದೇ ರೀತಿಯ ಹಾನಿ ಮಾಡುವುದಿಲ್ಲ ಹಾಗೂ ತಮ್ಮ ಆಸ್ತಿಯ ಪೂರ್ವ ದಿಕ್ಕಿನಲ್ಲಿ ಖಾಲಿ ಜಾಗ ಬಿಟ್ಟು ಮನೆಯನ್ನು ನಿರ್ಮಾಣ ಮಾಡುವುದಾಗಿ ಒಪ್ಪಿದ್ದರು. ಹಾಗಿದ್ದಾಗ್ಯೂ ಸಹ ಪ್ರತಿವಾದಿಯರು ತಮ್ಮ ಸ್ವತ್ತಿನ ಪೂರ್ವಕ್ಕೆ ಯಾವುದೇ ಖಾಲಿ ಜಾಗವನ್ನು ಬಿಡದೆ ತಳಪಾಯವನ್ನು ತೆಗೆದಿದ್ದು, ದಾವಾ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿರುವ ಗೋಡೆಗೆ ಹಾನಿಯನ್ನುಂಟು ಮಾಡಿ ದಾವಾ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡಿ, ತನಗೆ ಸ್ವಾಭಾವಿಕವಾಗಿ ಬರುತ್ತಿದ್ದ ಗಾಳಿ ಮತ್ತು ಬೆಳಕಿಗೆ ತೊಂದರೆಯನ್ನುಂಟು ಮಾಡಿರುತ್ತಾರೆ. ಪುರಸಭೆಯವರು ನೀಡಿರುವ ಕಟ್ಟಡದ ನಿಯಮಗಳನ್ನು ಉಲ್ಲಂಘನೆ ಮಾಡಿರುತ್ತಾರೆ. ಪ್ರತಿವಾದಿಯರ ಕಾನೂನು ಬಾಹಿರ ಕೃತ್ಯದ ಬಗ್ಗೆ ಬೀರೂರು ಪುರಸಭೆಗೆ ಹಾಗೂ ಬೀರೂರು ಪೋಲೀಸ್ ಠಾಣೆಗೆ ತಿಳಿಸಿದಾಗ್ಯೂ ಸಹ ಸದರಿಯವರು ಯಾವುದೇ ಕಾನೂನು ಕ್ರಮವನ್ನು ತೆಗೆದುಕೊಂಡಿರುವುದಿಲ್ಲ ಹಾಗೂ ಸದರಿ ಪ್ರಕರಣವು ಸಿವಿಲ್ ಸ್ವರೂಪದ್ದಾಗಿರುವುದರಿಂದ ನ್ಯಾಯಾಲಯದ ಮೂಲಕ ಬಗೆಹರಿಸಿಕೊಳ್ಳುವಂತೆ ತಿಳಿಸಿರುತ್ತಾರೆ. ಪ್ರತಿವಾದಿಯರು ಬಲಾಢ್ಯರು ಹಾಗೂ ರಾಜಕೀಯ ಪ್ರಭಾವಿ ವ್ಯಕ್ತಿಗಳಾಗಿದ್ದು ಸದರಿ ಕಾನೂನು ಬಾಹೀರ ಕೃತ್ಯವನ್ನು ನ್ಯಾಯಾಲಯದ ಆದೇಶದ ವಿನಾಃ ತನ್ನಿಂದ ತಡೆಯಲು ಸಾಧ್ಯವಾಗಿರುವುದಿಲ್ಲ.

4. ಮುಂದುವರೆದು, ನ್ಯಾಯಾಲಯವು ತನ್ನ ಪರವಾಗಿ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶವನ್ನು ನೀಡದಿದ್ದಲ್ಲಿ ತನಗೆ ತುಂಬಲಾರದ ಹಾನಿ ಉಂಟಾಗುತ್ತದೆ. ಅಂತೆಯೇ ತಾನು ಈ ಪ್ರಕರಣದಲ್ಲಿ ತನ್ನ ಪರವಾಗಿ ಮೇಲ್ನೋಟಕ್ಕೆ

ಸಾಬೀತುಪಡಿಸಬಹುದಾದಂತಹ ಪ್ರಕರಣವನ್ನು ಹೊಂದಿದ್ದು ಮತ್ತು ತನ್ನ ಪರವಾಗಿ ಅನುಕೂಲತೆಯ ಒಲುಮೆಯನ್ನು ಸಹ ಹೊಂದಿರುತ್ತಾರೆ. ಆದ್ದರಿಂದ, ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿ ವಾದಿಯು ಕೋರಿರುವಂತೆ ನ್ಯಾಯ ಮತ್ತು ಸಮಾನತೆ ದೃಷ್ಟಿಯಿಂದ ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಪರಿಹಾರ ನೀಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

5. ಈ ಪ್ರಕರಣದಲ್ಲಿ ಪ್ರತಿವಾದಿಯರು ಸದರಿ ಅರ್ಜಿಗೆ ತಕರಾರನ್ನು ಸಲ್ಲಿಸಿದ್ದು, ತಕರಾರಿನಲ್ಲಿನ ಅಂಶಗಳು ಈ ಕೆಳಕಂಡಂತೆ ಇವೆ:-

ವಾದಿಯು ಸುಳ್ಳು ಅಂಶಗಳನ್ನು ನಮೂದಿಸಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ದಾವೆಯ ವಾಸ್ತವಾಂಶವನ್ನು ಮರೆಮಾಚಿರುತ್ತಾರೆ. ವಾದಿಯು ಹೇಳಿರುವಂತೆ ದಾವಾ ಆಸ್ತಿಯು ಅಸ್ಥಿತ್ವದಲ್ಲಿ ಇರುವುದಿಲ್ಲ ಬದಲಾಗಿ ಪ್ರತಿವಾದ ಪತ್ರದ ಶೆಡ್ಯೂಲ್ ನ ಪೂರ್ವಕ್ಕೆ 16 X 22 ಅಡಿಯ ನಾಡ ಹಂಚಿನ ಮನೆ ಮತ್ತು 16 X 28 ಅಡಿ ಖಾಲಿ ನಿವೇಶನ ಇರುವುದಿಲ್ಲ ಬದಲಾಗಿ 16 X 50 ಅಡಿಯ ಆರ್ ಸಿ ಸಿ ಮನೆ ಇರುತ್ತದೆ. ಸದರಿ ಮನೆಯ ಪಶ್ಚಿಮ ದಿಕ್ಕಿಗೆ ಯಾವುದೇ ಖಾಲಿ ಜಾಗ ಇರುವುದಿಲ್ಲ. ಪ್ರತಿವಾದಿಯರು ಪ್ರತಿವಾದ ಪತ್ರದ ಶೆಡ್ಯೂಲ್ ಆಸ್ತಿ ಅಸೆಸ್ಮೆಂಟ್ ನಂಬರ್ 3711/3596 ರಲ್ಲಿ ಪೂರ್ವ-ಪಶ್ಚಿಮ 5.029210 ಮೀಟರ್ ಹಾಗೂ ಉತ್ತರ - ದಕ್ಷಿಣ 15.240030 ಮೀಟರ್ ವಿಸ್ತೀರ್ಣದ ಆಸ್ತಿಯನ್ನು ಖರೀದಿಸಿದ ನಂತರ, ಕಟ್ಟಡ ನಿರ್ಮಾಣ ಮಾಡಲು ಪುರಸಭೆಯಿಂದ ಕಟ್ಟಡದ ಪರವಾನಗಿಯನ್ನು ಪಡೆದು ಕಟ್ಟಡವನ್ನು ನಿರ್ಮಾಣ ಮಾಡಲು ಪ್ರಾರಂಭಿಸಿರುತ್ತಾರೆ.

6. ಮುಂದುವರೆದು, ವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ ಮಾರಾಟಗಾರರು ಸಂಪೂರ್ಣ 16X50 ಅಡಿ ವಿಸ್ತೀರ್ಣದಲ್ಲಿ ಹಳೆಯ ಹಂಚಿನ ಮನೆಯನ್ನು ಕಟ್ಟಿದ್ದರು. ವಾದಿಯು ದಾವಾ ಆಸ್ತಿಯನ್ನು ಖರೀದಿಸಿದ ನಂತರ ಸಂಪೂರ್ಣ 16X50 ಅಡಿ ಆಸ್ತಿಯಲ್ಲಿ ಆರ್ ಸಿ ಸಿ ಮನೆಯನ್ನು ನಿರ್ಮಿಸಿರುತ್ತಾರೆ. ವಾದಿಯಾಗಲೀ ಅಥವಾ ವಾದಿಯ ಮಾರಾಟಗಾರರಾಗಲೀ ದಾವಾ ಅನುಸೂಚಿತ ಪಶ್ಚಿಮಕ್ಕೆ ಯಾವುದೇ ಖಾಲಿ ಜಾಗವನ್ನು ಬಿಟ್ಟಿರುವುದಿಲ್ಲ. ವಾದಿಯು ಸಲ್ಲಿಸಿರುವ

ತಿದ್ದುಪಡಿ ವಾದ ಪತ್ರದ ಪ್ಯಾರಾ ನಂಬರ್ 2 ಮತ್ತು ಪರಿಹಾರ ಕಾಲಂ ನಲ್ಲಿ ಹೇಳಿರುವ ಸಂಗತಿಗಳಿಂದ ವಾದಿಯು ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಆರ್ ಸಿ ಸಿ ಮನೆ ಇರುವುದನ್ನು ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ಧೇಶದಿಂದ ಮರೆಮಾಚಿರುತ್ತಾರೆ. ವಾದಿಯು ನ್ಯಾಯಾಲಯಕ್ಕೆ ಶುದ್ದವಾದ ಹಸ್ತದೊಂದಿಗೆ ಬರದೇ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತಾರೆ. ವಾದಿಯು ಈ ಪ್ರಕರಣದಲ್ಲಿ ತನ್ನ ಪರವಾಗಿ ಮೇಲ್ನೋಟಕ್ಕೆ ಸಾಬೀತುಪಡಿಸುವಂತಹ ಪ್ರಕರಣವನ್ನು ಹೊಂದಿರುವುದಿಲ್ಲ. ಆದ್ದರಿಂದ ಸದರಿ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ವಜಾಗೊಳಿಸಬೇಕೆಂದು ಮತ್ತು ಈಗಾಗಲೇ ನ್ಯಾಯಾಲಯವು ಮಧ್ಯಂತರ ಅರ್ಜಿ ಸಂಖ್ಯೆ 1ರ ಮೇಲೆ ನೀಡಿರುವ ತಾತ್ಕಾಲಿಕ ತಡೆಯಾಜ್ಞೆಯ ಅದೇಶವನ್ನು ತೆರವುಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

7. ಉಭಯ ಪಕ್ಷಗಾರರ ವಕೀಲರ ವಾದವನ್ನು ಆಲಿಸಲಾಯಿತು.

8. ಮೇಲ್ಕಾಣಿಸಿದ ಸಂಗತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ನನ್ನ ಪರಿಶೀಲನೆಗೆ ಉದ್ಭವಿಸಿರುತ್ತವೆ:-

ಅಂ ಶ ಗ ಳು

1. **ವಾದಿ/ಅರ್ಜಿದಾರರು ಮೇಲ್ನೋಟಕ್ಕೆ ಸಾಬೀತುಪಡಿಸುವ ಪ್ರಕರಣವನ್ನು ಹೊಂದಿರುತ್ತಾರೆ ಎನ್ನುವುದನ್ನು ಸಾಬೀತುಪಡಿಸಿ ದ್ದಾರೆಯೇ?**

2. **ವಾದಿ/ಅರ್ಜಿದಾರರು ತಮ್ಮ ಪರವಾಗಿ ಅನುಕೂಲತೆಯ ಸಮತೋಲನವನ್ನು ಹೊಂದಿರುತ್ತಾರೆ ಎನ್ನುವುದನ್ನು ಸಾಬೀತುಪಡಿಸಿದ್ದಾರೆಯೇ?**

3. **ವಾದಿ/ಅರ್ಜಿದಾರರು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡದೇ ಹೋದಲ್ಲಿ ತಮಗೆ ತೊಂದರೆ ಹಾಗೂ ಲುಕ್ಸಾನು ಆಗುತ್ತದೆ ಎನ್ನುವುದನ್ನು ಸಾಬೀತುಪಡಿಸಿದ್ದಾರೆಯೇ?**

4. **ಹಾಗಾದರೆ ಯಾವ ಆದೇಶ?**

9. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿರುತ್ತದೆಃ-

ಅಂಶ 1ಃ- ನಕಾರಾತ್ಮಕವಾಗಿ,

ಅಂಶ 2ಃ- ನಕಾರಾತ್ಮಕವಾಗಿ,

ಅಂಶ 3ಃ- ನಕಾರಾತ್ಮಕವಾಗಿ,

ಅಂಶ 4ಃ- ಅಂತಿಮ ಆದೇಶದಂತೆ ಕೆಳಕಂಡ ಕಾರಣಗಳಿಗಾಗಿಃ

ಕಾ ರ ಣ ಗ ಳು

10. ಅಂಶ ಸಂಖ್ಯೆ 1 ರಿಂದ 3ಃ- ಈ ಮೂರು ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಇವುಗಳಿಗೆ ನೀಡುವ ಕಾರಣಗಳು ಒಂದೇ ಇರುವುದರಿಂದ ಇವುಗಳನ್ನು ಒಟ್ಟಿಗೆ ಚರ್ಚಿಸಲಾಗಿದೆ. ಈ ಮಧ್ಯಂತರ ಅರ್ಜಿಯು ಅಕಾಲಿಕ ಹಂತವಾಗಿರುವುದರಿಂದ (premature) ಈ ಮಧ್ಯಂತರ ಅರ್ಜಿಯನ್ನು ವಿಲೇವಾರಿ ಮಾಡುವ ಉದ್ದೇಶಕ್ಕಾಗಿ ಮಾತ್ರ ಅಭಿಪ್ರಾಯವು ಈ ಹಂತದಲ್ಲಿ ಸ್ಪಷ್ಟವಾಗಿರುತ್ತದೆ. ಈ ಅವಲೋಖನವು ಪ್ರಕರಣದ ಅಂತಿಮ ವಿಲೇವಾರಿಯಲ್ಲಿ ಯಾವುದೇ ತೂಕವನ್ನು ಹೊಂದಿರುವುದಿಲ್ಲ.

11. ವಾದಿಯು ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 39 ನಿಯಮ 1 ಮತ್ತು 2 ಸಹಕಲಂ 151 ರ ಅಡಿಯಲ್ಲಿ ಸಲ್ಲಿಸಿರುತ್ತಾರೆ. ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡುವ ಉದ್ದೇಶ ಏನೆಂದರೆ ದಾವಾ ಸ್ವತ್ತಿನ ಬಗ್ಗೆ ವಿವಾದಿಸುತ್ತಿರುವ ಪಕ್ಷದವರು ತಮ್ಮ ಹಕ್ಕುಗಳನ್ನು ನಿರ್ಣಯಿಸಿಕೊಳ್ಳುವವರೆಗೆ ದಾವಾ ಸ್ವತ್ತಿನ ಸ್ಥಿತಿಗತಿಯನ್ನು ದಾವೆಯನ್ನು ದಾಖಲಿಸುವಾಗ ಇದ್ದ ಸ್ಥಿತಿಯಲ್ಲಿಯೇ ಇರಿಸಿಕೊಂಡು ಹೋಗಬೇಕೆಂಬುದು ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶವನ್ನು ಮಾಡುವ ಉದ್ಧೇಶವಾಗಿರುತ್ತದೆ. ಒಂದು ವೇಳೆ ಹಾಗೆ ಮಾಡದೇ ಹೋದರೆ ವಾದಿಯ ದಾವೆಯೇ ಅಥವಾ ಪ್ರತಿವಾದಿಯ ಪ್ರತಿವಾದವೇ ಅರ್ಥಹೀನವಾಗಿ ಹೋಗಬಹುದು. ಅಲ್ಲದೆ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶವನ್ನು ನೀಡುವಾಗ ಹೆಚ್ಚಾಗಿ ಸ್ವಾಭಾವಿಕ ನ್ಯಾಯದ ಮತ್ತು ಧರ್ಮ ನ್ಯಾಯದ ತತ್ವಗಳನ್ನು ಅನ್ವಯಿಸಬೇಕಾಗುತ್ತದೆ.

12. ವಾದಿಯು ಸಲ್ಲಿಸಿರುವ ವಾದಪತ್ರ, ಪ್ರತಿವಾದ ಪತ್ರ, ಮಧ್ಯಂತರ ಅರ್ಜಿ ಸಂಖ್ಯೆ 1 ಹಾಗೂ ಸದರಿ ಮಧ್ಯಂತರ ಅರ್ಜಿಗೆ ಪ್ರತಿವಾದಿಗಳು ಸಲ್ಲಿಸಿರುವ ತಕರಾರು ಹಾಗೂ ಉಭಯ ಪಕ್ಷಗಾರರು ಸಲ್ಲಿಸಿರುವ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ಈ ಪ್ರಸ್ತುತ ಪ್ರಕರಣದಲ್ಲಿ ವಾದಿಯು ವಾದ ಪತ್ರದಲ್ಲಿ ನಮೂದಿಸಿರುವ ಆಸ್ತಿಯ ಮಾಲೀಕರು ಮತ್ತು ಪ್ರತಿವಾದಿಯರು ಪ್ರತಿವಾದ ಪತ್ರದಲ್ಲಿ ನಮೂದಿಸಿರುವ ಶೆಡ್ಯೂಲ್‌ನ ಆಸ್ತಿಯ ಮಾಲೀಕರಾಗಿರುತ್ತಾರೆ ಮತ್ತು ಪ್ರತಿವಾದಿಯರು ಪುರಸಭೆಯಿಂದ ಕಟ್ಟಡ ಪರವಾನಗಿಯನ್ನು ಪಡೆದುಕೊಂಡಿರುತ್ತಾರೆ ಎಂಬುದರ ಬಗ್ಗೆ ಯಾವುದೇ ವಿವಾದ ಇರುವುದಿಲ್ಲ ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

13. ವಾದಿಯು ಈ ದಾವೆಯನ್ನು ಪ್ರತಿವಾದಿಯರ ವಿರುದ್ದ ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿ ಸಲ್ಲಿಸಿರುವುದು ಕಂಡುಬರುತ್ತದೆ. ಈ ದಾವೆಯಲ್ಲಿ ವಾದಿಯು ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 39 ನಿಯಮ 1 ಮತ್ತು 2 ಸಹಕಲಂ 151 ರ ಅಡಿಯಲ್ಲಿ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಕೋರಿ ಈ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ.

14. ವಾದಿಯು ಮಧ್ಯಂತರ ಅರ್ಜಿಗೆ ಪೂರಕವಾಗಿ ದಿನಾಂಕ 18-05-2002 ರಂದು ವಾದಿಯು ದಾವಾ ಸ್ವತ್ತನ್ನು ಅಬ್ದುಲ್ ಕರೀಂ ಸಾಬ್ ರವರಿಂದ ಖರೀದಿ ಮಾಡಿದ ಬಗ್ಗೆ ಆದ ಕ್ರಯ ಪತ್ರವನ್ನು, 2020-2021 ನೇ ಸಾಲಿನ ಆಸ್ತಿ ತೆರಿಗೆ ಬೇಡಿಕೆ ಸಂಗ್ರಹಣೆ ವಹಿಯನ್ನು, ಪ್ರತಿವಾದಿಯು, ವಾದಿಯ ದಾವಾ ಸ್ವತ್ತಿನ ಪಕ್ಕದಲ್ಲಿ ಕಟ್ಟಡ ನಿರ್ಮಾಣ ಮಾಡುತ್ತಿರುವ ಬಗ್ಗೆ ಛಾಯಾಚಿತ್ರಗಳನ್ನು, ಒಂದು ಸಿ.ಡಿ.ಯನ್ನು, ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಕಂದಾಯವನ್ನು ಪಾವತಿ ಮಾಡಿದ ಬಗ್ಗೆ 2 ಕಂದಾಯ ರಶೀದಿಗಳನ್ನು, ಕಟ್ಟಡದ ಆಸ್ತಿ ತೆರಿಗೆ ಸ್ವಯಂ ನಿರ್ಧರಣಾ ನಮೂನೆಯನ್ನು, ಬೀರೂರು ಪುರಸಭೆ ಮುಖಾಧಿಕಾರಿಯವರಿಗೆ ನೀಡಿದ 2 ದೂರಿನ ಪ್ರತಿಗಳನ್ನು, ಬೀರೂರು ಪೋಲೀಸ್ ಠಾಣೆಗೆ ದೂರು ನೀಡಿದ ಬಗ್ಗೆ ಪೋಲೀಸ್ ಠಾಣೆಯವರು ನೀಡಿದ ಸ್ವೀಕೃತಿಯನ್ನು, ಕಟ್ಟಡ ಪರವಾನಗಿ ಹಾಗೂ ಇತರೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ.

15. ಇದಕ್ಕೆ ಪ್ರತಿಯಾಗಿ ಪ್ರತಿವಾದಿಯರು ಇ-ಸ್ವತ್ತಿನ ಎಕ್ಸ್ ಟ್ರಾಕ್ಟ್ , ಕ್ರಯ ಪತ್ರದ ದೃಡೀಕೃತ ನಕಲನ್ನು, ಆಧಾರ್ ಕಾರ್ಡ್ ನ ದೃಡೀಕೃತ ನಕಲನ್ನು, ಪುರಸಭೆಯವರು ನೀಡಿರುವ ಕಟ್ಟಡ ಪರವಾನಗಿ, ಅನುಮೋದಿತ ನಕಾಶೆಯನ್ನು, ಛಾಯಾಚಿತ್ರಗಳನ್ನು ಹಾಗೂ ಒಂದು ಸಿ.ಡಿ. ಯನ್ನು ಹಾಜರುಪಡಿಸಿರುತ್ತಾರೆ.

16. ವಾದಿಯು ತನ್ನ ವಾದ ಪತ್ರದಲ್ಲಿ ಹೇಳುವುದೇನೆಂದರೆ ದಾವಾ ಆಸ್ತಿಯ ಒಟ್ಟು ವಿಸ್ತೀರ್ಣ 16X50 ಅಡಿ ಇದ್ದು, ಅದರಲ್ಲಿ 10X40 ಅಡಿಯ ಆರ್ ಸಿ ಸಿ ಮನೆ ಮತ್ತು ಉಳಿದಿದ್ದು ಖಾಲಿ ನಿವೇಶನವು ದಾವಾ ಆಸ್ತಿಯ ಪಶ್ಚಿಮಕ್ಕೆ ಇರುತ್ತದೆ ಎಂದು ಆಧರಿಸಿರುತ್ತಾರೆ. ಇದಕ್ಕೆ ಪ್ರತಿಯಾಗಿ ಪ್ರತಿವಾದಿಯರು ಹೇಳುವುದೇನೆಂದರೆ ದಾವಾ ಆಸ್ತಿಯ ಒಟ್ಟು ವಿಸ್ತೀರ್ಣ 16X50 ಅಡಿ ವಿಸ್ತೀರ್ಣದಲ್ಲಿ ಸಂಪೂರ್ಣ ಮನೆಯನ್ನು ಕಟ್ಟಿರುತ್ತಾರೆ. ಹಾಗಾಗಿ ದಾವಾ ಆಸ್ತಿಯ ಪಶ್ಚಿಮಕ್ಕೆ ಯಾವುದೇ ಖಾಲಿ ನಿವೇಶನ ಇರುವುದಿಲ್ಲ ಎಂದು ಆಧರಿಸಿರುತ್ತಾರೆ. ವಾದಿಯು ಸಲ್ಲಿಸಿರುವ ಕ್ರಯ ಪತ್ರವನ್ನು ಪರಿಶೀಲಿಸಿದಾಗ ದಿನಾಂಕ 18-05-2002 ರಲ್ಲಿ ಶ್ರೀಮತಿ ಮಂಗಳಮ್ಮ ಇವರು ಅಬ್ದುಲ್ ಕರೀಂ ಸಾಹೇಬ್ ರವರಿಂದ ಅಸೆಸ್ಮೆಂಟ್ ನಂ.3709 ಕ್ರ.ಸಂ.3594 ಪೂರ್ವ – ಪಶ್ಚಿಮ 16 ಅಡಿ ಮತ್ತು ಉತ್ತರ – ದಕ್ಷಿಣ 50 ಅಡಿಗಳು ಇದರಲ್ಲಿ 16X22 ಅಡಿ ನಾಡ ಹಂಚಿನ ಮನೆ ಮತ್ತು 16X22 ಅಡಿಯ ಹಿತ್ತಲು ಅದರ ಚಕ್ಕುಬಂದಿ ಪೂರ್ವಕ್ಕೆ - ದಸ್ತಗೀರ್ ಸಾಹೇಬ್ ರವರ ಬಾಬ್ತು ಮನೆ, ಪಶ್ಚಿಮಕ್ಕೆ - ಬೈಲಾಲ್ ರವರ ಬಾಬ್ತು ಮನೆ, ದಕ್ಷಿಣಕ್ಕೆ - ಪುರಸಭೆಯ ಚರಂಡಿ ಮತ್ತು ಉತ್ತರಕ್ಕೆ - ಪುರಸಭೆಯ ರಸ್ತೆ ಇರುತ್ತದೆ. ಈ ಚಕ್ಕುಬಂದಿಯಲ್ಲಿರುವ ಆಸ್ತಿಯನ್ನು ಕ್ರಯಕ್ಕೆ ಪಡೆದಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

17. ಅದೇ ರೀತಿಯಾಗಿ ವಾದಿಯು ಹಾಜರುಪಡಿಸಿದ 2020-21 ನೇ ಸಾಲಿನ ಅಸೆಸ್ಮೆಂಟ್ ವಹಿಯನ್ನು ಪರಿಶೀಲಿಸಿದಾಗ ಅಸೆಸ್ಮೆಂಟ್ ನಂ.3709 ಕ್ರ.ಸಂ.3594 ರ 16 ಇಂಟು 50 ಅಡಿಗಳು ಇದರಲ್ಲಿ 16X22 ಅಡಿ ಮತ್ತು 16X28 ಅಡಿ ಎಂದು ನಮೂದಿಸಿರುವುದು ಮತ್ತು ಶ್ರೀಮತಿ ಮಂಗಳಮ್ಮ ರವರ ಹೆಸರು ನಮೂದು ಆಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ವಾದಿಯು ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ ವಾದಿಯು ದಾವಾ ಆಸ್ತಿಯು 16X50 ಅಡಿಯ

ಪೈಕಿ 10X40 ಅಡಿ ಆರ್ ಸಿ ಸಿ ಮನೆ ಮತ್ತು ಉಳಿದಿದ್ದು ಖಾಲಿ ನಿವೇಶನ ಇರುತ್ತದೆ ಎಂಬುದನ್ನು ತೋರಿಸಲು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆದರೆ ದಾವಾ ಆಸ್ತಿಯ ಪೂರ್ವ-ಪಶ್ಚಿಮ 16 ಅಡಿಗಳು ಎಂಬುದು ನಿರ್ವಿವಾಧ ಅಂಶವಾಗಿದ್ದು, ವಾದಿಯ ವಾದವೇನೆಂದರೆ ಪೂರ್ವ-ಪಶ್ಚಿಮ 10 ಅಡಿ ಕಟ್ಟಡ ನಿರ್ಮಿಸಿ ಉಳಿದಿದ್ದು ಖಾಲಿ ನಿವೇಶನ ಇರುತ್ತದೆ ಎಂಬುದಾಗಿರುತ್ತದೆ. ವಾದಿಯು ಹಾಜರುಪಡಿಸಿರುವ 2020-21 ನೇ ಸಾಲಿನ ಅಸೆಸ್ ಮೆಂಟ್ ವಹಿಯನ್ನು ಪರಿಶೀಲಿಸಿದಾಗ ದಾವಾ ಆಸ್ತಿಯ ಭೂವಿಸ್ತೀರ್ಣ ಪೂರ್ವ-ಪಶ್ಚಿಮ 16 ಅಡಿಗಳು ಎಂದು ಮತ್ತು ಕಟ್ಟಡದ ವಿಸ್ತೀರ್ಣ ಪೂರ್ವ-ಪಶ್ಚಿಮ 16 ಅಡಿ ಎಂದು ಇರುವುದು ಮೆಲ್ನೋಟಕ್ಕೆ ಕಂಡು ಬರುತ್ತದೆ. ದಾವಾ ಆಸ್ತಿಯ ಪಶ್ಚಿಮಕ್ಕೆ ಮತ್ತು ಪೂರ್ವಕ್ಕೆ ಎಷ್ಟು ಖಾಲಿ ನಿವೇಶನ ಇರುತ್ತದೆ ಎಂಬುದರ ಬಗ್ಗೆ ನಿರ್ಧಿಷ್ಟವಾಗಿ ಹೇಳದೆ ಉಳಿದಿದ್ದು ಖಾಲಿ ನಿವೇಶನ ಮಾತ್ರ ಎಂದು ಹೇಳಿರುತ್ತಾರೆ. ವಾದಿಯು 10X40 ಅಡಿಯ ವಿಸ್ತೀರ್ಣದಲ್ಲಿ ಆರ್ ಸಿ ಸಿ ಮನೆಯನ್ನು ಕಟ್ಟಿರುತ್ತಾರೆ ಮತ್ತು ಸದರಿ ಮನೆಯ ಪಶ್ಚಿಮಕ್ಕೆ ಖಾಲಿ ನಿವೇಶನ ಇರುವುದನ್ನು ಪ್ರತಿವಾದಿಯು ಅಲ್ಲಗಳೆದಿರುತ್ತಾರೆ. ವಾದಿಯು 10X40 ಅಡಿ ವಿಸ್ತೀರ್ಣದಲ್ಲಿ ಆರ್ ಸಿ ಸಿ ಮನೆ ಕಟ್ಟಿರುತ್ತಾರೆ ಮತ್ತು ದಾವಾ ಆಸ್ತಿಯ ಪಶ್ಚಿಮಕ್ಕೆ ಖಾಲಿ ನಿವೇಶನ ಇರುತ್ತದೆಯೋ ಅಥವಾ ಇಲ್ಲವೋ ಎಂಬುದನ್ನು ಮತ್ತು ದಾವಾ ಆಸ್ತಿಯ ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ಎಷ್ಟು ಖಾಲಿ ನಿವೇಶನ ಇರುತ್ತದೆ ಎಂಬುದನ್ನು ಪರಿಶೀಲಿಸಲು ಉಭಯ ಪಕ್ಷಗಾರರ ಸಾಕ್ಷ್ಯಗಳ ವಿಚಾರಣೆ ಅತ್ಯವಶ್ಯಕವಾಗಿರುತ್ತದೆ. ಉಭಯ ಪಕ್ಷಗಾರರ ಸಾಕ್ಷ್ಯಗಳ ವಿಚಾರಣೆ ಇಲ್ಲದೇ ಕೇವಲ ವಾದಿಯ ವಾದ ಪತ್ರ ಮತ್ತು ಪ್ರತಿವಾದಿಯ ಪ್ರತಿವಾದ ಪತ್ರ ಮತ್ತು ಈ ಹಂತದಲ್ಲಿ ಉಭಯ ಪಕ್ಷಗಾರರು ಹಾಜರುಪಡಿಸಿರುವ ದಾಖಲಾತಿಗಳ ಆಧಾರದ ಮೇಲೆ ಮಾತ್ರ ವಾದಿಯು 10X40 ಅಡಿ ವಿಸ್ತೀರ್ಣದಲ್ಲಿ ಮನೆಯನ್ನು ಕಟ್ಟಿರುತ್ತಾನೆ ಮತ್ತು ಉಳಿದಿದ್ದು ದಾವಾ ಆಸ್ತಿಯ ಪಶ್ಚಿಮಕ್ಕೆ ಖಾಲಿ ಜಾಗ ಇರುತ್ತದೆ ಎಂದು ಪರಿಗಣಿಸಲು ಬರುವುದಿಲ್ಲ.

18. ಉಭಯ ಪಕ್ಷಗಾರರು ಕೂಡ ತಮ್ಮ ತಮ್ಮ ಸ್ವತ್ತುಗಳನ್ನು ಅಳತೆ ಮಾಡಿಸಿರುವ ಕುರಿತು ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಅಲ್ಲದೆ ದಾವಾ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿ ಖಾಲಿ ನಿವೇಶನ

ಬಿಡದೆ ಮನೆಯನ್ನು ನಿರ್ಮಾಣ ಮಾಡುತ್ತಿರುವ ಬಗ್ಗೆ ಯಾವುದೇ ಪ್ರಾಧಿಕಾರವು ಯಾವುದೇ ದಾಖಲಾತಿಯನ್ನು ನೀಡಿರುವುದು ಸಹ ಕಂಡು ಬಂದಿರುವುದಿಲ್ಲ. ವಾದಿ ಪರ ವಕೀಲರು ತಮ್ಮ ವಾದ ಮಂಡನೆಯಲ್ಲಿ ಪ್ರತಿವಾದಿಯರು ದಾವಾ ಆಸ್ತಿಯ ಪಶ್ಚಿಮಕ್ಕೆ ಯಾವುದೇ ಖಾಲಿ ಜಾಗವನ್ನು ಬಿಡದೇ ಕಟ್ಟಡ ನಿರ್ಮಾಣ ಮಾಡುತ್ತಿರುತ್ತಾರೆ. ಹಾಗಾಗಿ ತಮಗೆ ಸ್ವಾಭಾವಿಕವಾಗಿ ಬರುತ್ತಿರುವ ಗಾಳಿ ಮತ್ತು ಬೆಳಕಿಗೆ ತೊಂದರೆ ಉಂಟಾಗುತ್ತದೆ ಎಂದು ಹೇಳಿರುತ್ತಾರೆ. ಇದಕ್ಕೆ ಪ್ರತಿಯಾಗಿ ಪ್ರತಿವಾದಿ ಪರ ವಕೀಲರು ವಾದಿಯು ದಾವಾ ಆಸ್ತಿಯಲ್ಲಿ ಸಂಪೂರ್ಣವಾಗಿ ಮನೆಯನ್ನು ನಿರ್ಮಾಣ ಮಾಡಿರುತ್ತಾರೆ. ಹಾಗಾಗಿ ವಾದಿಯು ದಾವಾ ಆಸ್ತಿಯ ಪಶ್ಚಿಮಕ್ಕೆ ಯಾವುದೇ ಖಾಲಿ ಜಾಗವನ್ನು ಬಿಟ್ಟಿರುವುದಿಲ್ಲ ಎಂದು ಹೇಳಿರುತ್ತಾರೆ. ಪ್ರತಿವಾದಿಯರು ಪುರಸಭೆಯಿಂದ ಮನೆ ಕಟ್ಟಡ ನಿರ್ಮಾಣ ಮಾಡಲು ಅನುಮತಿಯನ್ನು ಪಡೆದಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

19. ಪುರಸಭೆಯ ಪ್ರಾಧಿಕಾರವು ತನ್ನ ವ್ಯಾಪ್ತಿಯಲ್ಲಿ ಬರುವ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡುವ ಏಕೈಕ ಪ್ರಾಧಿಕಾರವಾಗಿದೆ. ಒಂದು ವೇಳೆ ಯಾವುದೇ ವ್ಯಕ್ತಿಯು ಅನುಮೋದಿತ ನಕ್ಷೆಯ ಷರತ್ತುಗಳನ್ನು ಉಲ್ಲಂಘಿಸಿ ಯಾವುದೇ ಕಟ್ಟಡ ನಿರ್ಮಾಣ ಮಾಡುತ್ತಿದ್ದರೆ ಅಂತಹದ್ದನ್ನು ಕಾನೂನು ಪ್ರಕಾರ ಕ್ರಮಬದ್ದಗೊಳಿಸುವ ಅಧಿಕಾರ ಪುರಸಭೆಗೆ ಮಾತ್ರ ಇರುತ್ತದೆ. ಆದ್ದರಿಂದ ಅನುಮೋಧಿತ ನಕ್ಷೆಯನ್ನು/ಕಟ್ಟಡ ಪರವಾನಗಿಯನ್ನು ಉಲ್ಲಂಘನೆ ಮಾಡಿ ಕಟ್ಟಡ ನಿರ್ಮಾಣ ಮಾಡುತ್ತಿರುತ್ತಾರೆಯೋ ಇಲ್ಲವೋ ಎಂಬುದನ್ನು ಪುರಸಭೆಯೇ ನಿರ್ಧರಿಸಬೇಕಾಗುತ್ತದೆ ಮತ್ತು ಸದರಿ ನಕ್ಷೆಯ ಅಥವಾ ಕಟ್ಟಡ ಪರವಾನಗಿಯ ಷರತ್ತುಗಳ ಉಲ್ಲಂಘನೆಯನ್ನು ಕಟ್ಟಡ ನಿರ್ಮಾಣ ನಿಯಮಗಳ ಪ್ರಕಾರ ಸರಿಪಡಿಸಬಹುದೇ ಎಂಬುದನ್ನು ಸಹ ಪುರಸಭೆಯು ಮಾತ್ರ ನಿರ್ಧರಿಸುತ್ತದೆ. ಯಾವುದೇ ಅನುಮೋದಿತ ನಕ್ಷೆಯ ಅಥವಾ ಕಟ್ಟಡ ಪರವಾನಗಿಯ ಉಲ್ಲಂಘನೆಯಿಂದ ನೊಂದ ವ್ಯಕ್ತಿಯು ಪುರಸಭೆಗೆ ದೂರನ್ನು ನೀಡಬೇಕು. ಸದರಿ ದೂರಿನ ಮೇಲೆ ಪುರಸಭೆಯು ಯಾವುದೇ ಕಾನೂನು ಕ್ರಮವನ್ನು ತೆಗೆದುಕೊಳ್ಳದಿದ್ದ ಪಕ್ಷದಲ್ಲಿ ಮಾತ್ರ ನ್ಯಾಯಾಲಯದಲ್ಲಿ ಸೂಕ್ತ ಪರಿಹಾರವನ್ನು ಕೋರಬಹುದು. ಅಂತಹ ದಾವೆಯಲ್ಲಿ ಪುರಸಭೆಯು ಅವಶ್ಯಕ ಅಥವಾ ಸಕ್ಷಮ ಪಕ್ಷಗಾರರಾಗಿರಬೇಕು. ಪುರಸಭೆಗೆ

ತನ್ನ ಅಹವಾಲನ್ನು ಹೇಳಲು ಅವಕಾಶ ನೀಡದೆ ಸಿವಿಲ್ ನ್ಯಾಯಾಲಯವು ಸದರಿ ವಿವಾಧದ ಬಗ್ಗೆ ನ್ಯಾಯ ನಿರ್ಣಯ ಮಾಡುವುದು ಸೂಕ್ತವೆನಿಸುವುದಿಲ್ಲ. ಆ ಬಗ್ಗೆ ಮಾನ್ಯ ಉಚ್ಛ ನ್ಯಾಯಾಲಯವು 2005(1) ಕರ್ನಾಟಕ ಲಾ ಜರ್ನಲ್ ಪುಟ ಸಂಖ್ಯೆ 500 ಈ ತೀರ್ಪುಜನ್ಯದಲ್ಲಿ ವರದಿಯಾದ ರೋಹಿಣಿಬಾಯಿ -ವಿ - ಬಿ.ಎಲ್ ರಾಜಶ್ರೀ ಮತ್ತು ಇತರರು ತೀರ್ಪಿನಲ್ಲಿ ಈ ಕೆಳಗಿನಂತೆ ಉಲ್ಲೇಖ ಇರುತ್ತದೆ.

> **SPECIFIC RELIEF ACT, 1963, Section 38 – Respondent-plaintiff filed a suit for permanent injunction against defendant-appellant not to put up any construction on southern side compound - Trail Court decreed suit directing demolition of compound – This court observed that Bangalore City Corporation a necessary and proper party but plaintiff has not impleaded corporation. Aggrieved party can report to Corporation about violation of building bye-laws, if Corporation does not respond legally, party can invoke jurisdiction of Civil Court – Relief granted in judgment and decree bad in law and same set aside – Appeal allowed.**

20. ಈ ಪ್ರಸ್ತುತ ಪ್ರಕರಣದಲ್ಲಿ ಪ್ರತಿವಾದಿಯರು ಕಟ್ಟಡವನ್ನು ನಿರ್ಮಾಣ ಮಾಡಲು ಪುರಸಭೆಯಿಂದ ಪರವಾನಗಿಯನ್ನು ಪಡೆದಿರುತ್ತಾರೆ. ಪ್ರತಿವಾದಿಯರು ಸದರಿ ಕಟ್ಟಡ ಪರವಾನಗಿಯ ನಿಯಮಗಳನ್ನು ಉಲ್ಲಂಘನೆ ಮಾಡಿದ್ದರೆ ವಾದಿಯು ಪುರಸಭೆಗೆ ದೂರನ್ನು ಸಲ್ಲಿಸಬೇಕಾಗುತ್ತದೆ. ವಾದಿಯು ಪುರಸಭೆಯ ಮುಖ್ಯಾಧಿಕಾರಿಗೆ ದಿನಾಂಕ 08-6-2020 ರಂದು ತಮ್ಮ ಮನೆಯ ಪಕ್ಕದಲ್ಲಿ ಪ್ರತಿವಾದಿಯರು ಖಾಲಿ ಜಾಗ ಬಿಡದೇ ಮನೆ ಕಟ್ಟುತ್ತಿರುತ್ತಾರೆ ಎಂದು ದೂರನ್ನು ನೀಡಿರುತ್ತಾರೆ. ಆದರೆ ವಾದಿಯು ದಿನಾಂಕ 11-06-2020 ರಂದು ಈ ದಾವೆಯನ್ನು ಸಲ್ಲಿಸಿರುತ್ತಾರೆ. ಪುರಸಭೆಗೆ ದೂರನ್ನು

ನೀಡಿದ ಕೇವಲ 2 ದಿನಗಳ ನಂತರ ದಾವೆಯನ್ನು ಸಲ್ಲಿಸಿರುತ್ತಾರೆ. ವಾದಿಯು ಪುರಸಭೆಗೆ ನೀಡಿರುವ ದೂರಿನ ಮೇಲೆ ಪುರಸಭೆಯವರು ಕ್ರಮಗಳನ್ನು ತೆಗೆದುಕೊಳ್ಳುವುದಕ್ಕಿಂತ ಮೊದಲು ಈ ದಾವೆಯನ್ನು ಸಲ್ಲಿಸಿರುತ್ತಾರೆ. ಪುರಸಭೆಯವರು ಯಾವುದೇ ಕ್ರಮಗಳನ್ನು ತೆಗೆದುಕೊಳ್ಳಲು ಆಗಿರುವುದಿಲ್ಲ ಎಂದು ಹೇಳಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಮತ್ತು ಪುರಸಭೆಯವರು ಯಾವುದೇ ಕ್ರಮಗಳನ್ನು ತೆಗೆದುಕೊಳ್ಳದೇ ಇರುವ ಬಗ್ಗೆ ಮೇಲ್ಮನವಿ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

21. ಯಾವುದೇ ವ್ಯಕ್ತಿಯು ನ್ಯಾಯಾಲಯಕ್ಕೆ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿ ಬರಬೇಕಾದರೆ ಯಾವುದೇ ಮೂರನೇ ವ್ಯಕ್ತಿಯು ತನ್ನ ಹಕ್ಕಿಗೆ ಚ್ಯುತಿಯನ್ನುಂಟು ಮಾಡಿರುತ್ತಾರೆ ಮತ್ತು ಸದರಿ ಹಕ್ಕಿನ ಚ್ಯುತಿಯಿಂದ ತನ್ನ ಹಕ್ಕಿನ ಉಲ್ಲಂಘನೆಯಾಗುತ್ತದೆ ಎಂಬುದನ್ನು ನ್ಯಾಯಾಲಯಕ್ಕೆ ತೋರಿಸಬೇಕಾಗುತ್ತದೆ. ಆ ಬಗ್ಗೆ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯವು ಎ ಐ ಆರ್ 1964 ಮೈಸೂರು ಪುಟ ಸಂಖ್ಯೆ 74 ರಲ್ಲಿ ವರದಿಯಾದ Mathew Philips -Vs- P.O.Koshy ತೀರ್ಪಿನಲ್ಲಿ ಈ ಕೆಳಗಿನಂತೆ ಉಲ್ಲೇಖ ಇರುತ್ತದೆ.

> The party seeking the aid of the Court for an injunction must show that the act complained of is in violation of his right or is at least an act which, if carried into effect, will necessarily result in a violation of the right.
>
> The provision in the bye-law framed by Municipality requiring a clear space of 4 feet between the two adjoining premises does not create a right in a neighboring owner to institute a suit for injunction. It is for the appropriate authority under the Municipal Act to

> determine whether the terms and conditions of the license have been contravened by the license of the building. No temporary injunction can be granted in favor of the neighboring owner in such a case.

22. ಈ ಮೇಲಿನ ತೀರ್ಪುಜನ್ಯವನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಮುನಿಸಿಪಾಲಿಟಿಯವರು ನೀಡಿರುವ ಬೈಲಾಗಳ ಪ್ರಕಾರ ಬಿಡತಕ್ಕಂತಹ 4 ಅಡಿಗಳ ಖಾಲಿ ಜಾಗದ ಮೇಲೆ ಪರಸ್ಪರ ಹೊಂದಿಕೊಂಡಿರುವ ನೆರೆಹೊರೆಯವರಿಗೆ ಶಾಶ್ವತ ನಿರ್ಬಂಧಕಾಜ್ಞೆಯ ದಾವೆಯನ್ನು ದಾಖಲಿಸಲು ಯಾವುದೇ ಹಕ್ಕನ್ನು ನೀಡುವುದಿಲ್ಲ ಮತ್ತು ಕಟ್ಟಡ ಪರವಾನಗಿಯ ಷರತ್ತುಗಳ ಉಲ್ಲಂಘನೆಯಾಗಿದೆಯೋ ಅಥವಾ ಇಲ್ಲವೋ ಎಂಬುದನ್ನು ನಿರ್ಧರಿಸುವ ಏಕೈಕ ಸೂಕ್ತ ಪ್ರಾಧಿಕಾರವು ಮುನಿಸಿಪಾಲಿಟಿಯಾಗಿರುತ್ತದೆ. ಇಂತಹ ಪ್ರಕರಣಗಳಲ್ಲಿ ನೆರೆಹೊರೆಯವರ ಪರವಾಗಿ ತಾತ್ಕಾಲಿಕ ನಿರ್ಭಂಧಕಾಜ್ಞೆಯ ಆದೇಶವನ್ನು ನೀಡಲು ಬರುವುದಿಲ್ಲ ಎಂದು ಉಲ್ಲೇಖ ಇರುತ್ತದೆ. ಈ ಪ್ರಸ್ತುತ ಪ್ರಕರಣದಲ್ಲಿ ಪ್ರತಿವಾದಿಯರು ದಾವಾ ಆಸ್ತಿಯ ಪಶ್ಚಿಮಕ್ಕೆ ಖಾಲಿ ಜಾಗವನ್ನು ಬಿಡದೆ ಕಟ್ಟಡ ಪರಾನಗಿಯ ಉಲ್ಲಂಘನೆಯನ್ನು ಮಾಡಿ ಮನೆ ನಿರ್ಮಾಣ ಮಾಡುತ್ತಿರುತ್ತಾರೆ. ಮತ್ತು ಪ್ರತಿವಾದಿಯರು ಕಟ್ಟಡ ನಿರ್ಮಾಣ ಮಾಡುತ್ತಿರುವುದರಿಂದ ವಾದಿಗೆ ನೈಸರ್ಗಿಕವಾಗಿ ಬರುತ್ತಿರುವ ಗಾಳಿ ಮತ್ತು ಬೆಳಕಿಗೆ ತೊಂದರೆಯಾಗುತ್ತದೆ ಎಂದು ಹೇಳಿರುತ್ತಾರೆ. ವಾದಿಯು ಈ ದಾವೆಯಲ್ಲಿ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ಮಾತ್ರ ಕೋರಿರುತ್ತಾರೆ. ಹಾಗಾಗಿ ವಾದಿಗೆ ಸದರಿ ಸೆಟ್ ಬ್ಯಾಕ್ ಮೇಲೆ ಯಾವುದೇ ಹಕ್ಕು ಇಲ್ಲದೇ ಇರುವುದರಿಂದ ವಾದಿಯು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಪಡೆಯಲು ಅರ್ಹರಲ್ಲ ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿದೆ.

23. ನಿರ್ದಿಷ್ಟ ಪರಿಹಾರ ಅಧಿನಿಯಮದ ಕಲಂ 41(ಹೆಚ್) ಯಲ್ಲಿ ಒಬ್ಬ ಪಕ್ಷಕಾರನು ಯಾವುದೇ ಇತರ ಸಾಧಾರಣ ವಿಧಾನದಿಂದ (ನಂಬಿಕೆ ದ್ರೋಹದ ಪ್ರಕರಣಗಳಲ್ಲಿ ಹೊರತುಪಡಿಸಿ) ಖಚಿತವಾಗಿ ಸಮಾನ ಪರಿಣಾಮಕಾರಿ ಪರಿಹಾರವನ್ನು

ಪಡೆಯಲು ಅವಕಾಶವಿದ್ದಾಗ ನಿರ್ಬಂಧಕಾಜ್ಞೆಯನ್ನು ಪ್ರಧಾನ ಮಾಡಲು ಪ್ರತಿಷೇದವಿರುತ್ತದೆ ಎಂದು ಉಲ್ಲೇಖವಿರುತ್ತದೆ. ಅದ್ದರಿಂದ ಸದರಿ ಕಾನೂನಿನ ಪರಿಕಲ್ಪನೆಯನ್ನು ಪರಿಶೀಲಿಸುವುದು ಅತ್ಯವಶ್ಯಕವಾಗಿರುತ್ತದೆ. ಸದರಿ ಕಾನೂನಿನ ಪರಿಕಲ್ಪನೆ ಈ ಕೆಳಗಿನಂತೆ ಇರುತ್ತದೆ.

ಕಲಂ 41 ನಿರ್ಭಂದಕಾಜ್ಞೆಯನ್ನು ಯಾವಾಗ ನಿರಾಕರಿಸಲಾಗುವುದುಃ ಒಂದು ನಿರ್ಬಂಧಕಾಜ್ಞೆಯನ್ನು ....

41(ಹೆಚ್) ನಂಬಿಕೆ ದ್ರೋಹದ ಪ್ರಕರಣದಲ್ಲಿ ಹೊರತುಪಡಿ ಕಲಾಪದ ಯಾವುದೇ ಇತರ ಸಾಧಾರಣ ವಿಧಾನದಿಂದ ಖಚಿತವಾಗಿ ಸಮಾನ ಪರಿಣಾಮಕಾರಿ ಪರಿಹಾರವನ್ನು ಪಡೆಯಬಹುದಾದಂತಹ ಸಂದರ್ಭ ಃ

ಈ ಮೇಲಿನ ಕಾನೂನಿನ ಪರಿಕಲ್ಪನೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಒಬ್ಬ ಪಕ್ಷಕಾರನು ಯಾವುದೇ ಇತರ ಸಾಧಾರಣ ವಿಧಾನದಿಂದ (ನಂಬಿಕೆ ದ್ರೋಹದ ಪ್ರಕರಣಗಳಲ್ಲಿ ಹೊರತುಪಡಿಸಿ) ಖಚಿತವಾಗಿ ಸಮಾನ ಪರಿಣಾಮಕಾರಿ ಪರಿಹಾರವನ್ನು ಪಡೆಯಲು ಅವಕಾಶ ಇರುವಾಗ ನಿರ್ಬಂಧಕಾಜ್ಞೆಯನ್ನು ಪ್ರಧಾನ ಮಾಡಲು ಪ್ರತಿಷೇದವಿರುತ್ತದೆ. ಈ ಪ್ರಸ್ತುತ ಪ್ರಕರಣದಲ್ಲಿ ವಾದಿಗೆ ಪುರಸಭೆಯ ಪ್ರಾಧಿಕಾರದಿಂದ ಪರಿಣಾಮಕಾರಿ ಪರಿಹಾರವನ್ನು ಪಡೆಯಲು ಅವಕಾಶವಿದ್ದರೂ ಕೂಡಾ ಪುರಸಭೆಯವರು ಸ್ಥಳ ಪರಿಶೀಲನೆ ಮಾಡಿ ದೂರಿನ ಬಗ್ಗೆ ಕ್ರಮ ಕೈಗೊಳ್ಳುವ ಮೊದಲೇ ವಾದಿಯು ನ್ಯಾಯಾಲಯಕ್ಕೆ ಬಂದಿರುವುದು ಕಂಡು ಬರುತ್ತದೆ.

24. ತಾತ್ಕಾಲಿಕ ತಡೆಯಾಜ್ಞೆಯನ್ನು ಪಡೆಯಲು ನ್ಯಾಯಾಲಯಕ್ಕೆ ಬಂದಿರುವ ವ್ಯಕ್ತಿಯು ಮೇಲ್ನೋಟದ ಪ್ರಕರಣವನ್ನು ರುಜುವಾತುಪಡಿಸುವುದರ ಜೊತೆಗೆ ಅನುಕೂಲತೆಯ ಸಮತೋಲನವು ತನ್ನ ಪರವಾಗಿದೆ ಎಂದು ತೋರಿಸಬೇಕು ಮತ್ತು ತಾತ್ಕಾಲಿಕ ತಡೆಯಾಜ್ಞೆಯನ್ನು ನೀಡದಿದ್ದರೆ ಆತನಿಗೆ ಕಷ್ಟ ಮತ್ತು ನಷ್ಟ ಉಂಟಾಗುತ್ತದೆ ಹಾಗೂ ಅದನ್ನು ಹಣದಿಂದ ಸರಿಪಡಿಸಲು ಆಗದು ಎಂಬುದನ್ನು ನ್ಯಾಯಾಲಯಕ್ಕೆ ಮನದಟ್ಟು ಮಾಡಿಕೊಡಬೇಕಾಗುತ್ತದೆ. ಪ್ರತಿವಾದಿಯರು ವಾದಿಯ ಖಾಲಿ

ನಿವೇಶನವನ್ನು ಒತ್ತುವರಿ ಮಾಡಿ ಕಟ್ಟಡ ನಿರ್ಮಾಣ ಮಾಡುತ್ತಿರುತ್ತಾರೆ ಎಂಬುದು ವಾದಿಯ ವಾದವಾಗಿರುವುದಿಲ್ಲ. ಪ್ರತಿವಾದಿಯರು ತಮ್ಮ ಖಾಲಿ ನಿವೇಶನದಲ್ಲಿ ಮನೆಯನ್ನು ನಿರ್ಮಾಣ ಮಾಡುತ್ತಿರುತ್ತಾರೆ ಎಂಬುದು ನಿರ್ವಿವಾಧದ ಸಂಗತಿಯಾಗಿರುತ್ತದೆ. ಇದರಿಂದ ವಾದಿಗೆ ಯಾವುದೇ ತುಂಬಲಾರದ ಹಾನಿ ಮತ್ತು ನಷ್ಟ ಉಂಟಾಗುವುದಿಲ್ಲ. ಪ್ರತಿವಾದಿಯರು ಕಟ್ಟಡ ನಿರ್ಮಾಣವನ್ನು ಮಾಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಆದೇಶವನ್ನು ನೀಡಿದರೆ ಪ್ರತಿವಾದಿಯರಿಗೆ ತುಂಬಲಾರದ ನಷ್ಟ ಮತ್ತು ಹಾನಿ ಉಂಟಾಗುತ್ತದೆ ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿದೆ.

25. ವಾದಿ ಪರ ವಕೀಲರು ತಮ್ಮ ವಾದ ಮಂಡನೆಗೆ ಪೂರಕವಾಗಿ ಈ ಕೆಳಗಿನ ತೀರ್ಪುಜನ್ಯಗಳನ್ನು ಹಾಜರುಪಡಿಸಿರುತ್ತಾರೆ.

1. AIR 1964 All 193, Jyothi Prasad -Vs Shotamber Nath & others
2. (1996) 2 MLJ 505, C.Mayam Perumal Konar & others -Vs - Thangammal
3. AIR 1965 Mysore 292 Veerappa Mallappa Hadli & another -Vs – Nagappa Pakirappa Hadli
4. AIR 1968 AP151, Santhannagari Ramaiah & others -Vs- Narasimhapuram Narayan chetti.

26. ಪ್ರತಿವಾದಿ ಪರ ವಕೀಲರು ತಮ್ಮ ವಾದ ಮಂಡನೆಗೆ ಪೂರಕವಾಗಿ ಈ ಕೆಳಗಿನ ತೀರ್ಪುಜನ್ಯಗಳನ್ನು ಹಾಜರುಪಡಿಸಿರುತ್ತಾರೆ.

1. ILR 1990 Karnatka 1696, Annamma -Vs – Pattamma
2. ILR 1992 Karnataka 2905, R.Dilip Kumar -Vs – S.Ramu

ಈ ಮೇಲಿನ ತೀರ್ಪುಜನ್ಯಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ವಾದಿ ಮತ್ತು ಪ್ರತಿವಾದಿಯರು ಹಾಜರುಪಡಿಸಿರುವ ತೀರ್ಪುಜನ್ಯಗಳ ವಸ್ತುಸ್ಥಿತಿಯೇ ಬೇರೆ ಈ

ದಾವೆಯಲ್ಲಿರುವ ವಸ್ತುಸ್ಥಿತಿಯೇ ಬೇರೆ ಬೇರೆಯಾಗಿರುತ್ತವೆ. ಹಾಗಾಗಿ ಸದರಿ ತೀರ್ಪುಜನ್ಯಗಳು ಈ ಪ್ರಸ್ತುತ ಪ್ರಕರಣಕ್ಕೆ ಅನ್ವಯಿಸುವುದಿಲ್ಲ ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ.

27. ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ವಾದಿಯು ಈ ಪ್ರಕರಣದಲ್ಲಿ ಮೇಲ್ನೋಟಕ್ಕೆ ಸಾಬೀತುಪಡಿಸಬಹುದಾದ ಪ್ರಕರಣವನ್ನು ಹೊಂದಿರುತ್ತಾರೆಂದು ರುಜುವಾತುಪಡಿಸಲು ವಿಫಲರಾಗಿರುತ್ತಾರೆಂದು ನಿರ್ಣಯಕ್ಕೆ ಬರುತ್ತದೆ. ಹಾಗಾಗಿ ವಾದಿಯು ತನ್ನ ಪರವಾಗಿ ಅನುಕೂಲತೆಯ ಒಲವನ್ನು ಹೊಂದಿರುವುದಿಲ್ಲವೆಂದು ಒಂದೊಮ್ಮೆ ವಾದಿಯ ಪರವಾಗಿ ತಾತ್ಕಲಿಕ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡದಿದ್ದ ಪಕ್ಷದಲ್ಲಿ ವಾದಿಗೆ ತುಂಬಲಾರದ ನಷ್ಟವುಂಟಾಗುವುದಿಲ್ಲವೆಂದು ಮಾನ್ಯ ನ್ಯಾಯಾಲಯವು ನಿರ್ಣಯಕ್ಕೆ ಬರುತ್ತದೆ. ಆದ್ದರಿಂದ ಈ ಮೇಲ್ಕಂಡ ಅಂಶ 1 ರಿಂದ 3 ನ್ನು ನಕಾರಾತ್ಮಕ ಎಂದು ನಿರ್ಣಯಿಸಲಾಗಿದೆ.

28. **ಅಂಶ 4:-**ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ನಿರ್ಣಯಿಸಲಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಆ ದೇ ಶ

ವಾದಿಯು/ಅರ್ಜಿದಾರರು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವರ್ತಿ ಕಲಂ 151 ರ ಅಡಿಯಲ್ಲಿ ಸಲ್ಲಿಸಿದಂತಹ ಮಧ್ಯಂತರ ಅರ್ಜಿ ಸಂಖ್ಯೆ:1 ನ್ನು ತಿರಸ್ಕರಿಸಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶವಿರುವುದಿಲ್ಲ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಕಂಪ್ಯೂಟರ್ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ, ಓದಿ ತಿದ್ದಿ, ಪ್ರತಿ ತೆಗೆದು ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 10 ನೇ ಸೆಪ್ಟಂಬರ್ 2020 ರಂದು ನಾನು ಉದ್ಘೋಷಿಸಿದ್ದೇನೆ)

- ಸಹಿ -

(ಈರಪ್ಪ ಢವಳೇಶ್ವರ್)

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಪ್ರ.ದ.ನ್ಯಾ.ದಂ., ಕಡೂರು.